<u>ಪ್ರಧಾನ ಸಿವಿಲ್ ಮತ್ತು  ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>

**ಸಿ.ಸಿ. ನಂ. 313/2020**

| | | | |
|---|---|---|---|
| **ಹೆಸರು** | **:** | **ರಘು ಎನ** | **ಚಾ.ಸಾ. 21** |
| **ತಂದೆಯ ಹೆಸರು** | **:** | **ಎನ ಎಸ ರಾವ** | **ಪ್ರಾ.ಸಾ. 9** |
| **ವಯಸ್ಸು** | **:** | **41 ವರ್ಷ** | **ದಿನಾಂಕಃ 03-03-2025** |
| **ಉದ್ಯೋಗ** | **:** | **ಟ್ರೈನರ** | |
| **ವಾಸಸ್ಥಳ** | **:** | **ಬೆಂಗಳೂರು** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಮಾರ್ಚ 2019 ರಿಂದ ಅಕ್ಟೋಬರ 2019 ರವರೆಗೆ ಚಿಂಚೋಳಿಯಲ್ಲಿ ಪೋಲಿಸ ಠಾಣೆಯಲ್ಲಿ PSI ಆಗಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕಃ 13-05-2019 ರಂದು ಬೆಳಿಗ್ಗೆ 7-30 ಗಂಟೆಗೆ ಚಾಸಾ 1 ರವರು ನಮ್ಮ ಠಾಣೆಗೆ ಹಾಜರಾಗಿ ಒಂದು ಲಿಖಿತ ದೂರನ್ನು ಹಾಜರುಪಡಿಸಿದ್ದು ಸದರ ದೂರಿನ ಸಾರಾಂಶದ ಮೇರೆಗೆ ಠಾಣೆ ಗುನ್ನೆ ಸಂಖ್ಯೆಃ 58/2019 ರಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದ್ದೇನೆ.

ಈಗ ನೋಡುತ್ತಿರುವ ನಿಪಿ-2ರಲ್ಲಿ ನನ್ನ ಸಹಿ ಇದ್ದು, ಅದನ್ನು ನಿಪಿ-2(ಬಿ) ಮತ್ತು (ಸಿ) ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಪಿ-6 ಎಂದು ಗುರುತಿಸಲಾಯಿತು.

ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ 22 ರವರಿಗೆ ಸಲ್ಲಿಸಿದೇನೆ.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ SPR ವಕೀಲರಿಂದಃ</u>**

ಚಾಸಾ 1 ರವರ ದೂರು ಪಡೆದು ಪ್ರಕರಣ ದಾಖಲಿಸಿರುವ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1 ರವರ ಮಾತುಕೇಳಿ ಗಾಯಾಳುದಾರರಿಗೆ ಪರಿಹಾರ ಕೊಡಿಸಲು ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1 ರವರು ದೂರು ನೀಡದೇ ಇದ್ದರೂ ಸಹ ನಾನೇ ಅವರ ಸಹಿಯನ್ನು ಖಾಲಿ ದಾಖಲೆಯ ಪಡೆದು ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ 22 ರವರಿಗೆ ಸಲ್ಲಿಸಿರುವ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ.**